ಅವರಿಗೆ ಎಷ್ಟು ಜಾಗ ಬೇಕೋ ಅಷ್ಟನ್ನು ಕೊಟ್ಟು ಉಳಿದ ಜಾಗವನ್ನು ಸರ್ಕಾರದವರೇ ಇಟ್ಟುಕೊಳ್ಳಿ ಎಂದು.

ಅಧ್ಯಕ್ಷರು.—ಆ ಜಾಗ ಪವಿತ್ರವಾದುದು ಎಂದು ಮಾನ್ಯ ಸಚಿವರು ಹೇಳಲಿಲ್ಲ. ಅವರು ಹೇಳಿದ್ದು, ಆ ಜಾಗ ಬಹಳ ಪುರಾತನವಾದುದು ಎಂದು

ಶ್ರೀ ಎಂ. ವೀರಪ್ಪಮೊಯ್ಲಿ.—ನಾನ ಪವಿತ್ರವಾದ ಜಾಗ ಎಂದು ಹೇಳಲಿಲ್ಲ. It is the oldest stud farm in the country. The suggestion made by the hon. Member Sri H.T. Krishnappa we will bear it in mind.

ಶ್ರೀ ಬಿ.ಎ. ಮೊಹಿದ್ದೀನ್.—ಸ್ವಾಮಿ, ಈ ಸ್ಟಡ್ ಫಾರಂನ್ನು ೧ ಲಕ್ಷ ರೂಪಾಯಿಗೆ ಗುತ್ತಿಗೆ ಕೊಟ್ಟಿರುವುದಾಗಿ ಹೇಳಿದ್ದೀರಿ. ಇದನ್ನು ಯಾವ ಆಧಾರದ ಮೇಲೆನಿಗದಿ ಮಾಡಿದ್ದೀರಿ ? ೧೯೭೬ರ ನಂತರ ಪುನಃ ಗುತ್ತಿಗೆಯನ್ನು ಯಾವ ಆಧಾರದ ಮೇಲೆ ಹೆಚ್ಚಿಗೆ ಮಾಡಿದಿರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ಹೆಚ್ಚು ಮಾಡುವುದಕ್ಕೆ ನಮಗೆ ಅವಕಾಶವಿದೆ. ಆದರೂ ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ ಅದನ್ನು ವಿಚಾರ ಮಾಡಿ ನೋಡುತ್ತೇನೆ, ಸರ್ಕಾರಕ್ಕೆ ಹೆಚ್ಚು ಆದಾಯ ಬರುವುದಾದರೆ ಅದನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುವುದು ನಮ್ಮ ಕರ್ತವ್ಯ. ಇದರ ಬಗ್ಗೆ ಗಮನಹರಿಸಿ ಗುತ್ತಿಗೆ ಹಣವನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಯಾವ ಆಧಾರದ ಮೇಲೆ ಈ ಗುತ್ತಿಗೆ ಹಣವನ್ನು ನಿಗದಿ ಮಾಡಿದ್ದೀರಿ ಎಂದರೆ The hon. Member is aware that the rate is not fixed on the basis of the market value of the land. We have to talk with the BTC authorities and fix up the rate. We will do it.

ಶ್ರೀ ಆಂದಾನಯ್ಯ.—ಸ್ವಾಮಿ, ಈ ಕುಣಿಗಲ್ ಸ್ಟಡ್ ಫಾರಂನಲ್ಲಿ ಬೆಳೆದು ತಯಾರಾದಂಥ ಕುದುರೆಗಳು ನಮ್ಮ ದೇಶಾದ್ಯಂತ ಬಹಳ ಹೆಸರು ಪಡೆದಿವೆ ಮತ್ತು ಹೆಚ್ಚು ಹೆಚ್ಚು ಸಂಪಾದನೆಯನ್ನೂ ಕೂಡ ಈ ಫಾರಂನವರು ಗಳಿಸುತ್ತಿದ್ದಾರೆ. ಈ ದೃಷ್ಟಿಯಿಂದ ನೋಡುವುದಾದರೆ ಇವತ್ತು ನಾವು ಏನು ಗುತ್ತಿಗೆ ಹಣವನ್ನು ನಿಗದಿ ಮಾಡಿದ್ದೇವೆ ಇದು ಬಹಳ ಕಡಿಮೆ ಎನಿಸುತ್ತದೆ. ಆದ್ದರಿಂದ ಇದನ್ನು ೫ ಲಕ್ಷ ರೂಪಾಯಿಗೆ ಹೆಚ್ಚಿಸುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ, ನಮ್ಮ ರಾಜ್ಯದಲ್ಲಿ ರೇಸ್ ಕೋರ್ಸ್‌ನಿಂದ ಬಹಳ ಆದಾಯ ಸರ್ಕಾರಕ್ಕೆ ಬರುತ್ತಿದೆ. ಬೆಟ್ಟಿಂಗ್ ಟ್ಯಾಕ್ಸ್‌ನ್ನು ನಮ್ಮ ರಾಜ್ಯದಲ್ಲಿ ಹಾಕಿರುವಷ್ಟು ಬೇರೆ ಯಾವ ರಾಜ್ಯದವರೂ ಹಾಕಿಲ್ಲ. For the kind information of the hon. Member, very recently we have enhanced the betting tax. We will into it. ಗುತ್ತಿಗೆ ಹಣವನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದೀರಿ ಇದನ್ನು ನಾವು ಪರಿಶೀಲನೆ ಮಾಡುತ್ತೇವೆ,

Land acquisition for Construction of KSRTC Bus Depot in Kunigal Town.

541 SRI ANDANAIAH (Kunigal)—Will the Minister for Transport and Minor Irrigation be pleased to state.—

(a) whether the Karnataka State Road Transport Corporation has acquired lands for opening a Bus Depot at Kunigal in Tumkur District.

(b) if so, when it was acquired;

(c) the annual income that would be derived from the Coconut trees existing at the acquired land, by the Corporation.

(d) the number of years required to commence the work of this Depot ?

SRI M.M. J. SADYOJATHA (Minister for Transport and Minor Irrigation).

(a) Four acres of land has beed acquired.

(b) On 17-3-1969

(b) During 1977-78 Rs. I.550-00
1978-79 1,025-00
1979-80 1,628-00
1980-81 2·620-00

(d) This matter is under consideration.

ಶ್ರೀ ಆಂದಾನಯ್ಯ.—ಸ್ವಾಮಿ. ಕುಣಿಗಲ್‌ನಲ್ಲಿ ಒಂದು ಬಸ್ ಡಿಪೋವನ್ನು ಸ್ಥಾಪನೆ ಮಾಡ ಬೇಕೆಂದು ೧೯೬೯ರಲ್ಲಿ ೪ ಎಕರೆ ಜಮೀನನ್ನು ಈ ಸಾರಿಗೆ ಇಲಾಖೆಯರು ಸ್ವಾಧೀನ ಪಡಿಸಿಕೊಂಡಿದ್ದಾರೆ, ಸುಮಾರು ೧೦-೧೨ ವರ್ಷಗಳಿಂದ ಇದುವರೆಗೂ ಅಲ್ಲಿ ಒಂದು ಬಸ್ ಡಿಪೋವನ್ನು ಪ್ರಾರಂಭ ಮಾಡ ದಿರುವುದಕ್ಕೆ ಕಾರಣವಾದರೂ ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಯಂಕಟಪ್ಪ (ಸಾರಿಗೆ ಸಚಿವರ ಪರವಾಗಿ).—ಇದರಲ್ಲಿ ಯಾವ ಕಾರಣವೂ ಇಲ್ಲ. ಅಲ್ಲಿರ ತಕ್ಕ ನ್ಯಾಷನಲ್ ಹೈವೇ ಪ್ರಮಾಣ ಕಡಿಮೆ ಇರುವುದರಿಂದ ಇದನ್ನು ಮಾಡುವುದರಲ್ಲಿಸ್ವಲ್ಪ ತಡವಾಗಿದೆ ಅಷ್ಟೆ,

ಶ್ರೀ ಆಂದಾನಯ್ಯ.—ಸ್ವಾಮಿ, ನಮ್ಮ ಕುಣಿಗಲ್‌ನಲ್ಲಿ ನ್ಯಾಷನಲ್ಲಿ ಹೈವೇ ಎಲ್ಲಿದೆ ? ನೀವು ಜಮೀನನ್ನು ಸ್ವಾಧೀನ ಪಡಿಸಿಕೊಂಡು ಆ ಜಮೀನಿನಲ್ಲಿ ತೆಂಗಿನ ಸಸಿಗಳನ್ನು ನೆಟ್ಟಿದ್ದು ಈಗ ಅವು ಫಲ ಕೊಡುತ್ತಿವೆ. ಆ ಫಸಲನ್ನು ಹರಾಜು ಹಾಕಿ ಪ್ರತಿವರ್ಷವೂ ಸುಮಾರು ೬-೭ ಸಾವಿರ ರೂ, ಗಳನ್ನು ಸಂಪಾದನೆ ಮಾಡಿಕೊಳ್ಳುತ್ತಿದ್ದೀರಿ. ಇಷ್ಟಾದರೂ ಕೂಡ ಅಲ್ಲಿ ಏತಕ್ಕೆ ನೀವು ಬಸ್ ಡಿಪೋವನ್ನು ಪ್ರಾರಂಭ ಮಾಡಿಲ್ಲ ?

ಶ್ರೀ ಕೆ, ಯಂಕಟಪ್ಪ.—ಈ ಡಿಪೋವಿಗೆ ಸಂಬಂಧಪಟ್ಟಂತೆ ಅಂದಾಜು ತಯಾರಾಗಿದೆ. ೧೯೮೧-೮೨ನೇ ಸಾಲಿನಲ್ಲಿ ಈ ಡಿಪೋವಿನ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

Formation of Roads in Sharavathy Project Area.

723 SRI L. T. THIMMAPPA HEGDE (Sagar).—Will the Minister for Public Works be pleased to state.—

(a) the number and extent of roads formed in connection with rehabilitation of Sharavathy Valley Project ; taluk-wise particulars for the last 5 years may be furnished ;

(b) whether it has come to the notice of Government that such roads are not fit for communication without annual repairs;

(c) will the Government look into the matter of keeping the existing roads in good condition avoiding difficulties of Communication being experienced by the people of this area ?